**ಪ್ರಧಾನ ದಿವಾಣಿ ಹಾಗೂ ಪ್ರಧಾನ ಜೆ.ಎಂ.ಎಫ್.ಸಿ. ಧಾರವಾಡ ಇವರ ನ್ಯಾಯಾಲಯದಲ್ಲಿ,**

**ಧಾರವಾಡ**

**ಸಿ.ಸಿ. ನಂಬರ್ಃ** 219/2017

**ಪಿ.ಡಬ್ಲ್ಯುಃ 10**

| | | |
|---|---|---|
| ಸಾಕ್ಷಿಯ ಹೆಸರು | : | ವಿರೇಶ ಬಳ್ಳಾರಿ |
| ತಂದೆಯ ಹೆಸರು | : | ಈರಪ್ಪ ಬಳ್ಳಾರಿ |
| ವಯಸ್ಸು | : | 51 ವರ್ಷ |
| ಉದ್ಯೋಗ | : | ಪಿ ಎಸ್ ಐ, ಸಂಚಾರಿ ಪಿ . ಎಸ್ ಧಾರವಾಡ |
| ವಾಸಸ್ಥಳ | : | ಹೊಸಯಲ್ಲಾಪುರ, ಧಾರವಾಡ |

**ದಿಃ 18–07–2026 ರಂದು ಸಾಕ್ಷಿಯನ್ನು ಕರೆಯಿಸಿ ವಿಧಿಬದ್ಧವಾಗಿ ಪ್ರಮಾಣ ವಚನವನ್ನು ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದಃ**

1. ನಾನು ದಿಃ01-08-2024 ರಿಂದ ದಿಃ12-09-2025 ರವರೆಗೆ ಉಪನಗರ ಪೋಲಿಸ್ ಠಾಣೆಯಲ್ಲಿ ಪಿ ಎಸ್ ಐ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

2. ಪಿ ಐ ರವರ ಆದೇಶದ ಮೇರೆಗೆ ಸದರಿ ಪ್ರಕರಣದ ಮುಂದಿನ ತನಿಖೆಯನ್ನು ಕೈಂಗೊಂಡಿರುತ್ತೇನೆ. ದಿಃ13-08-2024 ರಂದು ಮುಖ್ಯ ವಿದ್ಯುತ್ ಪರಿವೀಕ್ಷಕರಿಗೆ ಲಿಫ್ಟ ದುರಸ್ಥಿಯಲ್ಲಿ ಇತ್ತೊ ಅಥವಾ ಸರಿಯಾಗಿ ಕಾರ್ಯ ನಿರ್ವಹಿಸಿತ್ತೋ ಎಂದು ವಿವರ ಕೇಳಿ ಪತ್ರವನ್ನು ಬೆರದಿದ್ದೆನು. ದಿಃ14-03-2024 ರಂದು ಮಾನ್ಯ ಮುಖ್ಯ ವಿದ್ಯುತ್ ಪರೀವಿಕ್ಷಕರು ಧಾರವಾಡ ಅವರ ಕಡೆಯಿಂದ ಪ್ರಮಾಣ ಪತ್ರವನ್ನು ಪಡೆದುಕೊಂಡು ಹೆಚ್ಚುವರಿ

ದೋಷಾರೋಪಣೆ ಪಟ್ಟಿ ಸಲ್ಲಿಸಿರುತ್ತೇನೆ. ಸಾಕ್ಷಿಯು ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.28 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಆರೋಪಿ ಪರವಾಗಿ ಶ್ರೀ. ಆರ್ ವಿ ಕೆ ವಕೀಲರಿಂದ**

1. ಈ ಪ್ರಕರಣದಲ್ಲಿ ನಾನು ತನಿಖಾಧಿಕಾರಿ ಇರುವುದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ನಾನು ಯಾವುದೇ ತನಿಖೆಯನ್ನು ಮಾಡಿರುವುದಿಲ್ಲ ಎಂದರೆ ಪರಿವೀಕ್ಷಕರ ಕಡೆಯಿಂದ ಪ್ರಮಾಣ ಪತ್ರ ಪಡೆದಿರುತ್ತೇನೆ. ವಿದ್ಯುತ್ ಪರಿವೀಕ್ಷಕರಿಗೆ ದಾಖಲೆಯನ್ನು ಪೂರೈಸುವ ಸಲುವಾಗಿ ಯಾವುದೇ ಪತ್ರವನ್ನು ಬರೆದಿರುವುದಿಲ್ಲ ಎಂದರೆ ಸರಿಯಲ್ಲ. ಪತ್ರವನ್ನು ನಾನು ದಿಃ13-03-2024 ರಂದು ಕೊಟ್ಟಿದ್ದೆನು. ಆ ವರದಿಯನ್ನು ನಾನು ಸ್ವೀಕೃತ ಮಾಡಿರುವುದಿಲ್ಲ ಎಂದರೆ ಸರಿ. ಘಟನೆಯು 2015 ರಲ್ಲಿ ಆಗಿರುತ್ತದೆ, ಮತ್ತು ನಾನು ಪತ್ರವನ್ನು 2024 ರಲ್ಲಿ ಬರೆದಿದ್ದೆನು ಎಂದರೆ ಸರಿ. ಪರಿವೀಕ್ಷಕರಿಗೆ ಪತ್ರ ಬರೆದು ದಾಖಲೆಯನ್ನು ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.**)

**ಓ. ಹೇ. ಕೆ. ಸರಿ ಇದೆ.** **ನನ್ನ ಸಮಕ್ಷಮ**

**ಪ್ರಧಾನ ದಿವಾಣಿ ನ್ಯಾಯಾಧೀಶರು**

**ಮತ್ತು ಪ್ರಧಾನ ಜೆ.ಎಂ.ಎಫ್.ಸಿ. ಧಾರವಾಡ.**

**ಸಿ.ಸಿ. ನಂಬರ್‍ಃ 219/2017**

**ಪಿ.ಡಬ್ಲ್ಯುಃ 10**